ಶ್ರೀ ವೈ. ಯಂ. ಚಂದ್ರಶೇಖರಯ್ಯ.—ಈ ಟ್ಯಾಂಕ್ ಪಂಚಾಯಿತಿ ಮಾಡುವುದಕ್ಕೆ ಎಷ್ಟು ದಿವಸ ಬೇಕು, ಸ್ವಾಮಿ ?

(ಉತ್ತರವಿಲ್ಲ.)

Halumalledevara Amrit Mahal Kaval (Release for gomal)

Q.—656. **Sri C. H. LINGADEVARU** (Chiknaikanahalli).—

Will the Government be pleased to state :—

(*a*) the extent of Halumalledevara Amrit Mahal Kaval in Chiknaikanahalli Taluk (including the extent belonging to the neighbouring taluk) ;

(*b*) the amount of 'Hullubanni' paid annually by the residents of Bommenahalli (a neighbouring village of the kaval of Chiknaikanahalli Taluk) and who is collecting this ;

(*c*) whether there is a gomal land for this village and whether there are lands which could come under cultivation ;

(*d*) whether correspondence is not going on in respect of the request made by the residents of this village for releasing 500 acres of land from this kaval for purposes of gomal and cultivation, and since how long this correspondence has been going on and the stage at which it is pending at present?

A.—**Dr. R. NAGAN GOWDA** (Minister for Agriculture).—

(*a*) 2,527 acres and 17 guntas.

(*b*) Rs. 31 per year.

This is collected by the Animal Husbandry Department.

(*c*) There is a gomal of only 22 acres and 17 guntas for Bommenahalli village and this is inadequate. No other Government lands are available for cultivation in this village.

(*d*) No question is pending before Government.

ಶ್ರೀ ಸಿ. ಎಚ್. ಲಿಂಗದೇವರು.—ಆ ಅಮೃತ ಮಹಲ್ ಕಾವಲಿಗೆ ದನಗಳು ಮೇಯ್ಯುವುದಕ್ಕೆ ಹೋಗುತ್ತಿವೆಯೇ, ಸ್ವಾಮಿ ?

*ಡಾ॥ ಆರ್. ನಾಗನಗೌಡ.—ಎಕನಾಮಿಕ್ ಫಾರಂಗೂ ಹೋಗುವುದುಂಟು. ಆ ಸಮಾಚಾರ ಇಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಆ ಕಾವಲಿನ ಕಾವಲುಗಾರ ಆ ಗ್ರಾಮದ ದನಗಳಿಗೆ ಒಂದು ರಾಸಿಗೆ 5 ರೂಪಾಯಿಗಳಿಂದ 10 ರೂಪಾಯಿಗಳ ವರೆಗೆ ಕಲೆಕ್ಟ್ ಮಾಡುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಸರ್ಕಾರದವರು collect ಮಾಡುವುದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಆ ಕಾವಲುಗಾರ ಕಲೆಕ್ಟ್ ಮಾಡುತ್ತಾ ಇರುವ ದುಡ್ಡು ಸರ್ಕಾರಕ್ಕೆ ಜಮಾ ಆಗುತ್ತಿಲ್ಲವೇ ?

ಡಾ॥ ಆರ್. ನಾಗನಗೌಡ.—ಹಾಗೆ ಕಲೆಕ್ಟ್ ಮಾಡಿದರೆ ತಪ್ಪಾಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಗೋಮಾಳ ಸಾಲದು ಎಂದು ಹೇಳಿದ್ದೀರಿ. ಅದನ್ನು ರಿಲೀಸ್ ಮಾಡಿಕೊಡಬೇಕೆಂದು ಹೇಳಿ ಗ್ರಾಮಸ್ಥರು 4-5 ವರ್ಷಗಳಿಂದ ಅರ್ಜಿಕೊಡುತ್ತಾ ಇಲ್ಲವೇ ?

ಡಾ॥ ಆರ್. ನಾಗನಗೌಡ.—ಈಗ ಕೆಲವು ವರ್ಷಗಳ ಹಿಂದೆ 2,000 ಎಕರೆ ಆಗರೇ ಸರೆಂಡರ್ ಮಾಡಿದ್ದಾರೆ. ಈಗ ಅರ್ಧ ಮಾತ್ರ ಉಳಿದಿದೆ. ಇದರ ಅವಶ್ಯಕತೆ ಇದೆ ; ಆದ್ದರಿಂದ ಇಟ್ಟುಕೊಳ್ಳಬೇಕಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಸ್ವಾಮಿ ಸರಂಡರ್ ಮಾಡಿದ್ದು ?

ಡಾ॥ ಆರ್. ನಾಗನಗೌಡ.—ಯಾವ ವರ್ಷ ಸರೆಂಡರ್ ಮಾಡಿದ್ದು ಎಂಬ date ಈಗ ಗೊತ್ತಿಲ್ಲ. 4,500 ಎಕರೆ ಜಮೀನು ಇತ್ತು. ಅದರಲ್ಲಿ 2,000 ಎಕರೆ ಸರೆಂಡರ್ ಮಾಡಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಎಂದು ಗೊತ್ತಾಗಿಲ್ಲವೇ ?

Mr. SPEAKER.—Some time back. The exact date is not known.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಇತ್ತೀಚೆಗೆ ಒಂದು ವರ್ಷದ ಕೆಳಗೆ ಸಬ್ ಡಿವಿಜ್ಞ ಆಫೀಸರು, ಅಮಲ್ದಾರರು spot inspection ಮಾಡಿ ರಿಲೀಸ್ ಮಾಡಿಕೊಡಬೇಕೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಅದನ್ನು ವಿಚಾರ ಮಾಡಿ ಆದಷ್ಟು ಬೇಗ ರಿಲೀಸ್ ಮಾಡಿಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಸರೆಂಡರ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ Animal Husbandry ಡಿಪಾರ್ಟ್‌ಮೆಂಟಿನವರು ಬರೆದಿದ್ದಾರೆ.

Agricultural Engineer and his Establishment.

Q.—685. **Sri S. KARIAPPA** (Virupakshapura).—

Will the Government be pleased to state :—

(*a*) whether there is an officer by the designation, Agricultural Engineer ;

(*b*) when this appointment was created ;

(*c*) the nature of his work ;

* Asterisk indicates that the remark or speech has not been revised by the Member concerned.

(*d*) his subordinate staff and their grades ?

A.—Dr. R. NAGAN GOWDA (Minister for Agriculture).—

(*a*) Yes.

(*b*) 1928.

(*c*) 1. Technical control over the Tractor and Lorry Operations in the State ; including repairs and overhauls and maintenance of spares and service parts.

2 Research in Agricultural Engineering ; designing and manufacture of new implements and conducting trials.

3 Civil works like construction of godowns and maintenance of Agricultural Departmental buildings.

(*d*) 1 One Tractor Engineer on Rs. 250—25—450. He is in in charge of Central Tractor Workshop, Hebbal.

2 One Senior Tractor Foreman on Rs. 120—10—180.

3 One Junior Tractor Foreman on Rs. 100—5—120.

4 Mechanics : two on Rs. 80—5—120.

5 Assistant Mechanics : four on Rs. 60—10/2—100. In District Headquarters there are four District Mechanics working on Rs. 80—5—120.

The Agricultural Engineer's Office consists of—

1 One Manager on Rs. 120—10—150 (now vacant).

2 Two I Division Clerks on Rs. 60—5—90/E.B. 6—150.

3 One Cashier on Rs. 40—2—50/E.B. 3—80.

4 Four II Division Clerks on Rs. 40—2—50/E.B. 3—80.

5 One Record Keeper on Rs. 40—2—50/E.B. 3—80.

6 One Typist on Rs. 40—2—50/E.B. 3—80.

7 One Overseer on Rs. 150—10—200.

ಶ್ರೀ ಎಸ್. ಕರಿಯಪ್ಪ.—ಅಗ್ರಿಕಲ್ಚರಲ್ ಇಂಜಿನಿಯರ್ ಸಿವಿಲ್ ಇಂಜಿನಿಯರಿಂಗ್ ಡಿಗ್ರಿ ತೆಗೆದು ಕೊಂಡಿರುವರೆ ?

ಡಾ॥ ಆರ್. ನಾಗನಗೌಡ.—ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಗ್ರಿ ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಮರಾಮತ್ ಇಲಾಖೆಯಲ್ಲಿ ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಯಾರ ಮೇಲೆ ಆಕ್ಷೇಪಣೆಯಿದೆಯೋ ಅಂಥವರನ್ನೇ ಇಲ್ಲಿಗೆ ಹಾಕುತ್ತಾರೆಂಬ ವದಂತಿಯಿದೆ. ಅದು ನಿಜವೆ ?

ಡಾ॥ ಆರ್. ನಾಗನಗೌಡ.—ಅದು ನಿಜವಿರಲಿಕ್ಕಿಲ್ಲ.

ಶ್ರೀ ಎಸ್. ಕರಿಯಪ್ಪ.—ಅಗ್ರಿಕಲ್ಚರಲ್ ಇಂಜಿನಿಯರು ತಾವು ಮಾಡುವ ಕೆಲಸದ ವರದಿಯನ್ನು ಪ್ರತಿ ತಿಂಗಳೂ ಕಳುಹಿಸುತ್ತಾರೆಯೆ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಸ್. ಕರಿಯಪ್ಪ.—ಅವರಿಗೆ ಕಳುಹಿಸಿರುವುದರಲ್ಲಿ ಎಷ್ಟು ಟ್ರ್ಯಾಕ್ಟರುಗಳನ್ನು ಈ ವರ್ಷ ಓವರ್ ಹಾಲ್ ಮಾಡಿದ್ದಾರೆ ? ಎಷ್ಟು ರಿಪೇರಿ ಮಾಡಿದ್ದಾರೆ ?

ಡಾ॥ ಆರ್. ನಾಗನಗೌಡ.—ಅದನ್ನು ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಮೊದಲೇ ಕೇಳಿದ್ದರೆ ನಮಾಚಾರ ಒದಗಿಸಬಹುದಾಗಿತ್ತು.

ಶ್ರೀ ಎಸ್. ಕರಿಯಪ್ಪ.—(*c*) ಪ್ರಶ್ನೆಗೆ ಉತ್ತರವಾಗಿ 'Research in Agricultural Engineering' ಎಂದು ಹೇಳಿದೆ. ಅವರು ಯಾವ ರಿಸರ್ಚ್ ಇದುವರೆಗೆ ಮಾಡಿದ್ದಾರೆಂದು ಪಟ್ಟಿ ಕೊಡುವುದಕ್ಕೆ ಸಾಧ್ಯವೆ ?

ಡಾ॥ ಆರ್. ನಾಗನಗೌಡ.—ಅಷ್ಟು ಶೀಘ್ರವಾಗಿ ಯಾರೂ ಮಾಡುವುದಕ್ಕಾಗುವುದಿಲ್ಲ ; ಸಾವಕಾಶವಾಗಿ ಮಾಡಬೇಕಾಗುತ್ತದೆ. ಈಗ ನಮ್ಮಲ್ಲಿ ಕೆಲವು ರಿಸರ್ಚ್‌ವರ್ಕ್ ಮಾಡಿದ್ದಾರೆ. ಇತ್ತೀಚೆಗೆ ಇವರು ಬಂದಮೇಲೆ ಆಗಿದೆಯೆಂದು ಹೇಳಲಾರೆ.

ಶ್ರೀ ಎಸ್. ಕರಿಯಪ್ಪ.—ಕಳೆದ 26 ವರ್ಷಗಳಲ್ಲೇ ನಾಗಿದೆಯೆಂದು ಸ್ಥೂಲವಾಗಿ ಹೇಳುವುದಕ್ಕೆ ಸಾಧ್ಯವೆ?

Mr. SPEAKER.—It is a long statement.

ಶ್ರೀ ಎಸ್. ಕರಿಯಪ್ಪ.—ಈಗ ಹೊಸದಾಗಿ ವ್ಯವಸಾಯದ ಮುಟ್ಟುಗಳ ಡಿಸೈನ್ ಮಾಡಿ ಅವುಗಳನ್ನು ತಯಾರುಮಾಡಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ಯಾವುದೂ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಅವರು ಯಾವುದಾದರೂ ಕಟ್ಟಡದ ಡಿಸೈನ್ ಮಾಡಿ ಕಟ್ಟಿಸಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ನನಗೆ ಗೊತ್ತಿಲ್ಲ.

ಶ್ರೀ ಎಸ್. ಕರಿಯಪ್ಪ.—ಅವರು ಟ್ರ್ಯಾಕ್ಟರುಗಳನ್ನು ರೀಕಂಡೀಷನ್ ಮಾಡಬೇಕೆಂದು ಇಲಾಖೆಯಿಂದ ತಿಳಿಸಿಲ್ಲವೆ ? ಎಷ್ಟೋ ಸಾರಿ ಹಾಗೆ ಹೇಳಿದರೂ ಮಾಡದೆ ನಿದ್ದೆಮಾಡುತ್ತಿದ್ದಾರೆಂದು ಅವರ ಮೇಲೆ ಆಕ್ಷೇಪಣೆ ಬಂದಿದೆಯೆ ? ಅವರು ವ್ಯವಸಾಯಕ್ಕೆ ಟ್ರ್ಯಾಕ್ಟರುಗಳನ್ನು ದುರಸ್ತುಮಾಡಿ ಕೆಲಸಕ್ಕೆ ಸಿದ್ಧಗೊಳಿಸಬೇಕೆಂದು ಇಲಾಖೆಯಿಂದ ಒತ್ತಾಯ ಬಂದರೂ ಆ ಬಗ್ಗೆ ಅವರು ಯಾವ ಕ್ರಮವನ್ನೂ ಕೈಕೊಳ್ಳದಿರುವುದು ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನಮ್ಮಲ್ಲಿ ಈಗ 40-50 (*c*) ಟ್ರ್ಯಾಕ್ಟರುಗಳಿವೆ. ಅವನ್ನು ರಿಪೇರಿ ಮಾಡಲು ಪ್ರಯತ್ನಮಾಡಿದೆ. ಆದರಲ್ಲೂ ಬಿಡಿಭಾಗಗಳು ಮುಂತಾದುವನ್ನು ಲಾರ್ಜ್‌ಸ್ಕೇಲ್ ಮೇಲೆ ರಿಪೇರಿಮಾಡಬೇಕಾಗಿದೆ. ಫೋರ್ಡ್‌ಸನ್ ಟ್ರ್ಯಾಕ್ಟರ್ಸ್ ಬಹಳವಾಗಿವೆ. ಅವುಗಳನ್ನು ಸರಿಮಾಡಲು United Provinces Commercial Corporation, Calcutta, ಇವರಿಗೆ ಸಹ ತಿಳಿಸಿರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಳಿಗೆಗಳನ್ನು ಕಟ್ಟಿಸುವುದು ಅವರ ಕೆಲಸದಲ್ಲಿ ಸೇರಿದೆಯೆಂದು

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಹೇಳಿದೆ. ಮೈಸೂರು ಸಂಸ್ಥಾನದಲ್ಲಿ ಅವರ ಕೈಕೆಳಗೆ ಎಷ್ಟು ಮಳಿಗೆಗಳಿವೆ ?

ಡಾ॥ ಆರ್. ನಾಗನಗೌಡ.—ಆ ಸಮಾಚಾರ ಈಗ ಸಿದ್ಧವಾಗಿ ದೊರೆಯುವಂತಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಹೇಳಿರುವ ಸಂತೋಧನೆ ಕೆಲಸ, ಚೆಕ್ಕಿಕಲ್ ಕಂಟ್ರೋಲ್, ಕಣ್ಸರ್ವೇಷನ್ ಆಫ್ ಗೋಡೌನ್ಸ್ ಮತ್ತು ಮೈಂಟೇನೆನ್ಸ್ ಕೆಲಸ ಇವೆಲ್ಲವನ್ನೂ ಒಬ್ಬರೇ ಮಾಡಬೇಕೆಂದರೆ ಬಹಳ ಜಾಸ್ತಿಯಲ್ಲವೆ ?

ಡಾ॥ ಆರ್. ನಾಗನಗೌಡ.—ಇಲ್ಲ, ಸೂಪರ್ ವೈಸ್ ಮಾಡುವುದು ಅವರ ಕೆಲಸ, ಕಟ್ಟುವ ಕೆಲಸ ಅವರದಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಟ್ರ್ಯಾಕ್ಟರು ಗಳನ್ನು ಮಾರುವ ಯೋಜನೆಯಿರುವಾಗ, ಅವುಗಳ ಉಪಯೋಗ ಹೆಚ್ಚಾಗಿಲ್ಲದಿರುವಾಗ ಇಂಜಿನಿಯರ ಹುದ್ದೆ ವಜಾ ಮಾಡುವುದು ಒಳ್ಳೆಯದಲ್ಲವೆ !

ಡಾ॥ ಆರ್. ನಾಗನಗೌಡ.—ಹಾಗೆ ಮಾಡುವುದ ಕ್ಕಾಗುವುದಿಲ್ಲ. ನಮ್ಮಲ್ಲಿರುವ ಟ್ರ್ಯಾಕ್ಟರುಗಳು ಸ್ವಲ್ಪ ಬ್ಯಾಡ್ ಕಂಡೀಷನ್‌ನಲ್ಲಿರುವುದರಿಂದ ಅವನ್ನು ಸರಿಯಾದ ಕಂಡೀಷನ್‌ನಲ್ಲಿಡುವುದಕ್ಕೆ ಮತ್ತು ನಮ್ಮಲ್ಲಿ ವರ್ಕಿಂಗ್ ಆರ್ಡರಿನಲ್ಲಿರುವ ಟ್ರ್ಯಾಕ್ಟರುಗಳನ್ನು ಮೈಂಟೈನ್ ಮಾಡಲು ಅವರ ಸಹಾಯ ಬೇಕಾಗುತ್ತದೆ. ಅಗ್ರಿಕಲ್ಚರಲ್ ಇಂಜಿನಿಯರ ಹುದ್ದೆಯನ್ನು ವಜಾಮಾಡಿದರೆ ನಷ್ಟವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಪಬ್ಲಿಕ್‌ವರ್ಕ್ಸ್ ಇಲಾಖೆ ಸಬ್‌ಡಿವಿಜನ್‌ನಲ್ಲಿ ಆಗುವ ಕೆಲಸವಾದರೂ ಇದರಲ್ಲಿ ನಡೆಯುತ್ತಿದೆಯೆ ?

ಡಾ॥ ಆರ್. ನಾಗನಗೌಡ.—ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಮಾಡುವುದೆಲ್ಲಾ ಬಹಳ ಮಾಮೂಲಿ ಕೆಲಸ ಮಾತ್ರ, ಅಂದರೆ ಯೂಷುಯಲ್ ವರ್ಕ್ಸ್, ಇಲ್ಲಿ ತಲೆ ಉಪಯೋಗ ಮಾಡುವ ಕೆಲಸವಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಪ್ರತಿಯೊಂದು ಜಿಲ್ಲೆಯಲ್ಲೂ ಟ್ರ್ಯಾಕ್ಟರುಗಳು ಮತ್ತು ಬುಲ್‌ಡೋಜರು ಗಳಿವೆಯೆ ?

ಡಾ॥. ಆರ್. ನಾಗನಗೌಡ.—ಇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅವು ಸಿಕ್ ಆದರೆ ಯಾರು ರಿಪೇರಿ ಮಾಡುವುದು ?

ಡಾ॥ ಆರ್. ನಾಗನಗೌಡ.—ಇಂಜನಿಯರು ಮಾಡುತ್ತಿದ್ದಾರೆ, ಅವರ ಕೈಕೆಳಗೆ ಸಿಬ್ಬಂದಿಯಿದೆ. ಅವರೂ ಅದನ್ನು ಕಲಿತು ಮಾಡುತ್ತಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳನ್ನು ರಿಪೇರಿಮಾಡಲು ಅವನ್ನು ಬೆಂಗಳೂರಿಗೇ ತರುವುದು ನಿಜವಲ್ಲವೆ ?

ಡಾ॥ ಆರ್. ನಾಗನಗೌಡ.—ಒಂದೊಂದು ಸಮಯದಲ್ಲಿ ತರಬೇಕಾಗುತ್ತದೆ. ಕೆಲವು ಸಂದರ್ಭ ಗಳಲ್ಲಿ ಸಣ್ಣ ರಿಪೇರಿ ಬೇಕಾದರೆ ಇರುವ ಕಡೆಯೇ ಮಾಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಸಣ್ಣದಾಗಲಿ, ದೊಡ್ಡದಾಗಲಿ ರಿಪೇರಿಯಾಗುವಾಗ ಒಂದೆರಡು ತಿಂಗಳೆ ಕಾಲ ಬೆಂಗಳೂರಿಗೆ ಹೋಗಿ ಅಲ್ಲಿರಲು ಇಷ್ಟ ಪಡುತ್ತಿಲ್ಲವೆ ?

ಡಾ॥ಆರ್. ನಾಗನಗೌಡ.—ಅಂಥ ಪೋಟಿವ್ ಇಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಕೆಲಸವಿಲ್ಲದಿರು ವಾಗ ಅವರನ್ನು ವಜಾ ಏಕೆ ಮಾಡಬಾರದು ? ಅದ ರಲ್ಲಿ ತೊಂದರೆಯೇನು ? ಬೇರೆ ವರ್ಕ್‌ಷಾಪ್ ಇರು ವಾಗ ಈ ಇಂಜಿನಿಯರೇಕೆ ?

ಅಧ್ಯಕ್ಷರು.—ಕೆಲಸವಿಲ್ಲವೆಂದು ಅವರು ಹೇಳಲಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಸೆಂಟ್ರಲ್ ವರ್ಕ್‌ ಷಾಪಿನಲ್ಲಿ ಮೆಕ್ಯಾನಿಕ್ಸ್ ಕೆಲಸಮಾಡಲು ಇರುವಾಗ ಈ ಇಂಜಿನಿಯರ ಆವಶ್ಯಕತೆಯೇನಿದೆ ?

ಡಾ॥ ಆರ್. ನಾಗನಗೌಡ.—ಇಂಜಿನಿಯರ ಕೈಕೆಳಗೆ ಕೆಲಸಮಾಡುವವರಿದ್ದಾರೆ, ಸೂಪರ್‌ವಿಷ್ಷ ಕೆಲಸ ಇಂಜಿನಿಯರಿಂದ ಆಗಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಪ್ರತಿಯೊಂದು ಡಿಸ್ಟ್ರಿಕ್ಟನಲ್ಲೂ ಟೂರ್ ಹೋಗಿ ಎಷ್ಟು ಟಿ.ಎ. ಕ್ಲೈಂ ಮಾಡಿದ್ದಾರೆ ?

ಡಾ॥ ಆರ್. ನಾಗನಗೌಡ.—ಅವಶ್ಯಕತೆ ಇದ್ದಾಗ ಹೋಗುತ್ತಾರೆ, ಇಲ್ಲದಿದ್ದರೆ ಹೋಗುವುದಿಲ್ಲ.

ಶ್ರೀ ಜಿ. ನಾರಾಯಣಗೌಡ.—ಟ್ರ್ಯಾಕ್ಟರುಗಳಿಂದ ನಮ್ಮ ದೇಶಕ್ಕೆ ಅಷ್ಟು ಪ್ರಯೋಜನವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ಡಾ॥ ಕೋಲ್ಮನ್‌ರವರೇನೋ ಒಂದು ಅಭಿಪ್ರಾಯ ಸೂಚಿಸಿ ದ್ದಾರೆ. ಆದರೂ ಟ್ರ್ಯಾಕ್ಟರುಗಳು ಬೇಕೆಂದು ರೈತರ ಕಡೆಯಿಂದ ಸರ್ಕಾರಕ್ಕೆ ಬರುವ ಅರ್ಜಿಗಳ ಸಂಖ್ಯೆ ಯನ್ನು ನೋಡಿದರೆ ಅವರಿಗೆ ಅವುಗಳಿಂದ ಒಂದು ವಿಧವಾದ ಉಪಯೋಗವಿದೆಯೆಂದು ಕಾಣುತ್ತದೆ.

ಶ್ರೀ ಜಿ. ನಾರಾಯಣಗೌಡ.—ಟ್ರ್ಯಾಕ್ಟರುಗ ಳಿಂದ ಉತ್ತಮೇಲೆ ನಮಗೆ ನಾಚಿ ನೇಗಿಲುಗಳಿಂದ ಅಥವಾ ಕಬ್ಬಿಣದ ನೇಗಿಲುಗಳಿಂದ ಉತ್ತ ಭೂಮಿ ಯಲ್ಲಿ ಬರುವ ಉತ್ಪತ್ತಿಗಿಂತ ಕಡಮೆ ಉತ್ಪತ್ತಿ ಬರು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—Dr. Coleman has given his opinion on the eve of his departure. He opines that in Malnad it is necessary in the first instance.

ಶ್ರೀ ಯು. ಎಂ. ಮಾದಪ್ಪ.—ಟ್ರ್ಯಾಕ್ಟರುಗಳನ್ನು ಈಗ ಹೈರ್ ಪರ್ಚೇಸ್ ಸಿಸ್ಟಂ ಪ್ರಕಾರ ಖಾಸಗಿ ಜನ ರಿಗೆ ಕೊಡುವುದಕ್ಕೆ ಮುಂಚೆ ಅಗ್ರಿಕಲ್ಚರಲ್ ಇಂಜಿ ನಿಯರು ಅವು ಗುಡ್ ಕಂಡೀಷನಲ್ಲಿವೆ ಎಂದು ಸರ್ಟಿಫೈ ಮಾಡುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲ, ಈಗ ಹೊಸ ಟ್ರ್ಯಾಕ್ಟರುಗಳನ್ನು ಹೈರ್ ಪರ್ಚೇಸ್ ಸಿಸ್ಟಂ ಮೇಲೆ ತೆಗೆದುಕೊಳ್ಳಲು ಏರ್ಪಾಡು ಮಾಡಿದೆ. ಇನ್ನೂ ಆ ಸಿಸ್ಟಂ ವರ್ಕ್ ಆಗುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಸಾಮಾನ್ಯವಾಗಿ ಜನರಿಗೆ ಕೊಡುವುದಕ್ಕೆ ಮುಂಚೆ ಗುಡ್ ಕಂಡೀಷನ ಲ್ಲಿದೆಯೆಂದು ಸರ್ಟಿಫೈ ಮಾಡುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲ, ಟ್ರ್ಯಾಕ್ಟರು ಗಳನ್ನು ಫ್ಯಾಕ್ಟರಿಗೆ ಹೋಗಿ ಬೇಕಾದವರು ಅವರೇ ಆರಿಸಿಕೊಂಡು ತೆಗೆದುಕೊಳ್ಳುವಂತೆ ಏರ್ಪಾಡು ಮಾಡಿದೆ, ಅವರಿಗೆ ಈ ಸ್ವಾತಂತ್ರ್ಯ ಕೊಟ್ಟಿದೆ.

12-30 P.M.

ಶ್ರೀ ವಿ. ಮಾಸಿಯಪ್ಪ.—'ಸಿ' ಭಾಗದ ಪ್ರಶ್ನೆಗೆ ಉತ್ತರವಾಗಿ "Research in Agricultural Engineering; designing and manufacture of new implements and conducting trials" ಎಂದು ಹೇಳಿದ್ದೀರಿ. 1928 ನೆಯ ಇಸವಿ ಯಿಂದ ಇಲ್ಲಿಯವರೆಗೆ ವ್ಯವಸಾಯಗಾರರಿಗೆ ಉಪ ಯೋಗವಾಗತಕ್ಕಂಥ ಯಾವುದಾದರೂ ಹೊಸ ಉಪ ಕರಣ ಕಂಡುಹಿಡಿದಿದ್ದಾರೆಯೇ ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಬುಲ್‌ಡೋಜರ್ಸ್, ಟ್ರ್ಯಾಕ್ಟರ್ಸ್—ಇವುಗಳನ್ನು hire-purchase system ನಲ್ಲಿ ತೆಗೆದುಕೊಳ್ಳುವಾಗ ಅವುಗಳ ಸ್ಥಿತಿಗತಿಗಳನ್ನು ನೋಡಿ ರೈತರು ತೆಗೆದುಕೊಂಡಿರುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಅವು ಸರಿಯಾದ condition ನಲ್ಲಿವೆಯೇ ಎಂಬುದನ್ನು ನೋಡಿಕೊಂಡೇ ತೆಗೆದುಕೊಂಡಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಹಾಗೆ ತೆಗೆದುಕೊಂಡು ಹೋದವುಗಳಲ್ಲಿ ಕೆಲವು ಸರಿಯಾಗಿಲ್ಲವೆಂದು ಪಾಪಸ್ಸು ಬಂದಿವೆಯೇ ?

ಡಾ॥ ಆರ್. ನಾಗನಗೌಡ.—ಕೆಲವು ಬಂದಿವೆ ; ಅವುಗಳು ರಿಪೇರಿ ಆಗಬೇಕಾಗಿವೆ.

ಶ್ರೀ ಬಿ. ರಾಚಯ್ಯ.— Hire-purchase system ಮೇಲೆ ಬುಲ್‌ಡೋಜರ್ಸ್ ಮತ್ತು ಟ್ರ್ಯಾಕ್ಟರ್ಸ್ ಕೊಟ್ಟಿರುವುದರಿಂದ ಈ ಹಣವನ್ನು ವಸೂಲುಮಾಡತಕ್ಕ ಅಧಿಕಾರವಿದೆಯೇ ?

ಡಾ॥ ಆರ್. ನಾಗನಗೌಡ.—ಅದು instalment loan ಆದುದರಿಂದ ಆ ಹಣವನ್ನು ಅವರು ಪಾವತಿ ಮಾಡಲೇಬೇಕು.

ಶ್ರೀ ಬಿ. ರಾಚಯ್ಯ.—ಇದನ್ನು ವಸೂಲು ಮಾಡುವ ಏಜೆನ್ಸಿ ಯಾವುದು ?

ಡಾ॥ ಆರ್. ನಾಗನಗೌಡ.—ಡೈರೆಕ್ಟರ್ ಆಫ್ ಅಗ್ರಿಕಲ್ಚರ್.

Bull-dozers and Tractors

Q.—984. **Sri D. R. KARI GOWDA** (Hassan).—

Will the Government be pleased to state :—

(*a*) the number of bull-dozers and tractors in the custody of the Agricultural Department in Hassan District ;

(*b*) the total number of hours that the bull-dozers have worked and the places where they have worked till now from 1st January 1953 ;

(*c*) the number of acres of land ploughed, the places in which such lands have been ploughed by each tractor from 1st January 1953 ;

(*d*) the amount spent on the establishment and other equipments of these tractors from 1st January 1953 ?

A.—**Dr. R. NAGAN GOWDA** (Minister for Agriculture).—

Tractors.

(*a*)—

5 in January and February 1953.
4 in March and April 1953.
3 in May, June and July 1953.
2 in August, September, October and November 1953.
1 in December 1953 and January 1954.

Bull-dozers

2 from January to September 1953.

Nil—October 1953.

1 during November and December 1953, and January 1954.

(*b*) (i) 1,760 hours.

(ii) Konanur, Yelavare, Kattepura, Arasikere, Kadalur, Jalagaranahally, Hullekere, Konanpur, Arsikere, Hole-Narasipur, Arkalgud, Ullival, Arkalgud, Hole-Narasipur, Hassan and Hassan Town Municipality.

(*c*)

	A.	G.
(i)	340	2

(ii) Information as to the places in which lands have been ploughed by each tractor is not readily available. Places in which lands have been ploughed by tractors from 1st January 1953 are noted below :

Belur, Alur, Hassan, Arsikere, Mandya and Hole-Narasipur.

(*d*) (i) Tractor Rs. 3,927-4-0
Bull-dozer Rs. 23,462-0-0

Total Rs. 27,389-4-0

ಶ್ರೀ ಡಿ. ಆರ್. ಕರಿಗೌಡ.—ಹಾಸನ ಡಿಸ್ಟ್ರಿಕ್ಟಿನ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ವಶದಲ್ಲಿ ಎರಡು ಬುಲ್‌ಡೋಜರುಗಳಿವೆಯೆಂದು ತಿಳಿಸಿದ್ದೀರಿ. ಒಂದೇನೋ ಇದೆ. ಇನ್ನೊಂದು ಎಲ್ಲಿದೆ ?

ಡಾ॥ ಆರ್. ನಾಗನಗೌಡ.—ವಿಚಾರಿಸಿ ತಿಳಿಸಬೇಕು.

ಶ್ರೀ ಡಿ. ಆರ್. ಕರಿಗೌಡ.—ವ್ಯವಸಾಯದ ಜಮೀನುಗಳನ್ನು ಸರಿಪಡಿಸುವುದಕ್ಕೆ ಇವುಗಳು ಬೇಕೆಂದು ಇಲ್ಲಿ ಕೆಲವರು ಕೇಳಿದರೂ, ಅವು ದೊರಕದೆ ವ್ಯವಸಾಯದ ಕೆಲಸ ಹಾಗೆಯೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?